

ಹೇರಳ ಸಂಪನ್ಮೂಲಗಳು ಹಾಗೂ ವಿಶಾಲ ಭೂಪ್ರದೇಶದಿಂದ ಅಮೆರಿಕಕ್ಕೆ ಜನಸಂಖ್ಯೆ ಭಾರವೆನ್ನಿಸಿಲ್ಲ.

# ಜನಸಂಖ್ಯಾ ದಿನ; ಹೊಸ ಸಮೀಕರಣ

ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದೆಹಲಿ ಹೈಕೋರ್ಟ್‌ನಲ್ಲಿ ದಾಖಲಿಸಿದ್ದರು. ಅಲ್ಲಿ ಅರ್ಜಿ ವಜಾ ಆಗಿದ್ದರಿಂದ ಈಗ ಸುಪ್ರೀಂ ಕೋರ್ಟ್‌ಗೆ ಸಲ್ಲಿಕೆಯಾಗಿದೆ. ಸ್ವಾತಂತ್ರ್ಯ ಬಂದಾಗಿನಿಂದ ಇದುವರೆಗೆ ಲೋಕಸಭೆ, ರಾಜ್ಯಸಭೆಗಳಲ್ಲಿ 35 ಸಲ ವಿಧೇಯಕದ ಪ್ರಸ್ತಾಪವಾಗಿದ್ದು, ಹಿಂದೆ ಆಡಳಿತದಲ್ಲಿದ್ದ ಕಾಂಗ್ರೆಸ್ 15 ಸಲ ಪ್ರಯತ್ನಿಸಿ ವಿಫಲವಾಗಿದೆ. 2015ರಲ್ಲಿ ಗೋರಖ್‌ಪುರದ ಸಂಸದರಾಗಿದ್ದ ಯೋಗಿ ಆದಿತ್ಯನಾಥ (ಈಗ ಉತ್ತರ ಪ್ರದೇಶದ ಮುಖ್ಯಮಂತ್ರಿ) ಕುಟುಂಬದ 'ಗಾತ್ರ' ನಿರ್ಧರಿಸುವ ಕಾನೂನನ್ನು ಪ್ರಧಾನಿ ಮೋದಿ ಜಾರಿಗೆ ತರಬಹುದೆ? ಎಂಬುದರ ಕುರಿತು ಆನ್‌ಲೈನ್‌ನಲ್ಲಿ ಸಮೀಕ್ಷೆ ನಡೆಸಿದ್ದರು.

2016ರಲ್ಲಿ ಬಿಜೆಪಿಯ ಪ್ರಹ್ಲಾದ್‌ಸಿಂಗ್ ಪಟೇಲ್ ಸಹ ವಿಧೇಯಕ ಮಂಡಿಸಿದ್ದರು. 2018ರಲ್ಲಿ 125 ಲೋಕಸಭಾ ಸದಸ್ಯರು, 'ಎರಡು ಮಕ್ಕಳ ನೀತಿ'ಯನ್ನು ಜಾರಿಗೆ ತರುವಂತೆ ರಾಷ್ಟ್ರಪತಿಗೆ ಮನವಿ ಸಲ್ಲಿಸಿದ್ದರು. 1970ರಲ್ಲಿ 'ನಾವಿಬ್ಬರು, ನಮಗಿಬ್ಬರು' ಎಂಬ ಕುಟುಂಬ ಯೋಜನೆ ಜಾರಿಗೆ ಬಂದಾಗ ಎಲ್ಲರೂ ಖುಷಿಯಾಗಿದ್ದರು. ಅದು ಕೆಲಕಾಲ ಕುಂಟುತ್ತಾ ಸಾಗಿತು. ನಿರೀಕ್ಷಿತ ಪ್ರಗತಿ ಕಾಣದಾದಾಗ ಸಂಜಯಗಾಂಧಿ ರಾಜ್ಯಗಳ ಅಧಿಕಾರವನ್ನು ಕೈವಶ ಮಾಡಿಕೊಂಡು ಬಲಾತ್ಕಾರದಿಂದ ಹೆಂಗಸರು, ಗಂಡಸರೆನ್ನದೆ ಸಂತಾನಹರಣ ಶಸ್ತ್ರಚಿಕಿತ್ಸೆ ನಡೆಸಿ ದೇಶದ ಇತಿಹಾಸದಲ್ಲೇ ಕರಾಳ ಅಧ್ಯಾಯವೊಂದನ್ನು ಬರೆದುಬಿಟ್ಟರು. ಅಂದಿನ ದಿನಗಳ ಪ್ರಮಾದಕ್ಕಾಗಿ ಇಂದಿನ ಕಾಂಗ್ರೆಸ್ ಪಕ್ಷ ಈಗಲೂ ಉತ್ತರವಿಲ್ಲದೆ ತಡಕಾಡುತ್ತಿದೆ!

1992ರಲ್ಲಿ 'ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್' ಜನಸಂಖ್ಯೆ ನಿಯಂತ್ರಣಕ್ಕೆ ಮಾರ್ಗದರ್ಶಿ ಸೂತ್ರ, ನೀತಿ ರೂಪಿಸಲು ಅಂದಿನ ಕೇರಳದ ಮುಖ್ಯಮಂತ್ರಿ ಕೆ. ಕರುಣಾಕರನ್‌ರ ನೇತೃತ್ವದ ಸಮಿತಿಯೊಂದನ್ನು ರಚಿಸಲಾಗಿತ್ತು. ಸಮಿತಿಯು, 'ಎರಡಕ್ಕಿಂತ ಹೆಚ್ಚು ಮಕ್ಕಳಿರುವ ರಾಜಕಾರಣಿಗಳು ಯಾವುದೇ ಚುನಾವಣೆಯಲ್ಲಿ ಭಾಗವಹಿಸುವಂತಿಲ್ಲ' ಎಂಬ ನಿಯಮ ರೂಪಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಹಗ್ಗ ಕೊಟ್ಟು ಕೈಕಟ್ಟಿಸಿಕೊಳ್ಳಲು ಯಾರೂ ತಯಾರಿರಲಿಲ್ಲ. ಸಮಿತಿಯ ಶಿಫಾರಸು ಕ್ಷಣ ಮಾತ್ರದಲ್ಲಿ ಕಸದ ಬುಟ್ಟಿ ಸೇರಿತ್ತು. ಹಾಲಿ, ಮಾಜಿ ಮತ್ತು ಆಕಾಂಕ್ಷಿ ರಾಜಕಾರಣಿಗಳೆಲ್ಲ ಅದನ್ನು ಒಕ್ಕೊರಲಿನಲ್ಲಿ ವಿರೋಧಿಸಿದ್ದರು. ಇದು ಯಾವುದೇ ಒಂದು ಕೋಮಿಗೆ ಅವಕಾಶ ನೀಡದಿರಲು ಮಾಡಿದ ಹುನ್ನಾರ ಎಂಬ ಅಪಾದನೆಯೂ ಬಂತು. ಅಲ್ಲಿ ಹಳಿತಪ್ಪಿದ ಚರ್ಚೆ ಇಲ್ಲಿಯವರೆಗೂ ದೇಶಕ್ಕಾಗಿ ಏಕರೂಪದ ಕಾನೂನು ರೂಪಿಸಲು ಆಸ್ಪದ ನೀಡಿಲ್ಲ.

1994ರಲ್ಲಿ ನಡೆದ ಅಂತರರಾಷ್ಟ್ರೀಯ 'ಪಾಪ್ಯುಲೇಶನ್ ಅಂಡ್ ಡೆವಲಪ್‌ಮೆಂಟ್

